ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

15

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE 3/3/2021

---

... ನಿರ್ಮಾಣ್ ಸಂಸ್ಥೆಯ ಕೆ. ನಾಗೇಂದ್ರ ಉಪಸ್ಥಿತರಿದ್ದರು.

# ಜನಸ್ನೇಹಿ ಬಜೆಟ್ ಮಂಡನೆ

## ಸಿಎಂ ಭರವಸೆ ರಾಘವೇಂದ್ರ ಮಠದಲ್ಲಿ ಹೋಮ

ಬೆಂಗಳೂರು : ಈ ಬಾರಿ ಎಲ್ಲಾ ವರ್ಗದವರಿಗೂ ಅನುಕೂಲವಾಗುವಂತಹ, ಜನಪರ ಬಜೆಟ್ ಮಂಡಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ನಗರದ ಪ್ರಾಣ ಪ್ರಜ್ಞಾ ಲೇಔಟ್‌ನಲ್ಲಿರುವ ಶ್ರೀ ಗುರು ರಾಘವೇಂದ್ರಸ್ವಾಮಿ ಮಠದಲ್ಲಿ ಬಜೆಟ್ ಸುಸೂತ್ರವಾಗಿ ಜರುಗಲೆಂದು ಹಮ್ಮಿಕೊಳ್ಳಲಾಗಿದ್ದ ನರಸಿಂಹಸ್ವಾಮಿ ಜಪ ಮತ್ತು ದುರ್ಗಾ ಹೋಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

**ಸಚಿವ ಅಶೋಕ್, ಕೆಲವು ಶಾಸಕರು ಸಾಥ್**

ಮಾರ್ಚ್ 8 ರಂದು ಬಜೆಟ್ ಮಂಡಿಸಲಿದ್ದೇನೆ. ಬಹು ನಿರೀಕ್ಷಿತ ಬಜೆಟ್‌ನ ಪೂರ್ಣ ಫಲ ರಾಜ್ಯದ ಜನರಿಗೆ ಸಿಗಬೇಕು ಎಂದು ಹೇಳಿದರು.

ಕೋವಿಡ್‌ನಿಂದ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಏರುಪೇರಾಗಿದ್ದು, ಇದರಿಂದ ರಾಜ್ಯವೂ ಕೂಡ ಹೊರತಾಗಿಲ್ಲ. ಅದೆಲ್ಲವನ್ನು ನಮ್ಮ ಸರ್ಕಾರ ಸಮರ್ಥವಾಗಿ ಎದುರಿಸಿದೆ. ನರೇಂದ್ರ ಮೋದಿಯವರು ಮಂಡಿಸಿದ ಬಜೆಟ್‌ನಂತೆ, ನಾನು ಮಂಡಿಸುವ ಬಜೆಟ್ ಎಲ್ಲ ವರ್ಗದ ಜನರ ಹಿತ ಕಾಯುವ ಬಜೆಟ್ ಆಗಿರುತ್ತದೆ ಎಂದರು.

**ರಾಘವೇಂದ್ರ ಸ್ವಾಮಿಯ ಆರಾಧಕ:** ನಾನು ರಾಘವೇಂದ್ರ ಸ್ವಾಮಿಗಳ ಆರಾಧಕ. ಈ ಹಿಂದೆ ರಾಯರ ಸನ್ನಿಧಿಯಲ್ಲಿ 20 ದಿನಗಳ ಕಾಲ ಹಗಲು ರಾತ್ರಿ ಸೇವೆ ಮಾಡಿದ್ದೆ. ರಾಯರ ಸೇವೆ ಮತ್ತು ಸ್ಮರಣೆ ಮಾಡಿದ ನಂತರ ಮಕ್ಕಳಾದ ರಾಘವೇಂದ್ರ ಮತ್ತು ವಿಜಯೇಂದ್ರ ಹುಟ್ಟಿದರು. ಹೀಗಾಗಿ ಅವರಿಬ್ಬರಿಗೂ ರಾಯರ ಹೆಸರನ್ನೇ ಇಟ್ಟಿದ್ದೇನೆ. ಒಂದು ದಿನವೂ ರಾಘವೇಂದ್ರರ ಸ್ಮರಣೆ ಮಾಡದೆ ನಾನು ದಿನ ಕಳೆಯುವುದಿಲ್ಲ. ಅವರ ಆಶೀರ್ವಾದದಿಂದಲೇ ನಾನು ಈ ಹುದ್ದೆಗೆ ಬಂದಿದ್ದೇನೆ ಎಂದು ಹೇಳಿದರು.

ಸಚಿವ ಅಶೋಕ್, ಶಾಸಕರಾದ ಎಂ. ಕೃಷ್ಣಪ್ಪ, ರಾಮುಗೌಡ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಮಾಜಿ ಕಾರ್ಪೋರೇಟರ್ ಹನುಮಂತಯ್ಯ, ನಿರ್ಮಾಣ್ ಸಂಸ್ಥೆಯ ನಾಗೇಂದ್ರ, ವೆಂಕಟೇಶ್ ಹೆಗಡೆ ಹೊಸಹಾಳ ಮತ್ತಿತರರು ಉಪಸ್ಥಿತರಿದ್ದರು.

### ಎರಡು ದಿನಗಳಲ್ಲಿ ಲಸಿಕೆ ಹಾಕಿಸಿಕೊಳ್ಳುವೆ

ಎಲ್ಲಾದರು ಲಸಿಕೆ ಹಾಕಿಸಿಕೊಳ್ಳಲಿ, ಹಾಕಿಸಿಕೊಳ್ಳುವುದಷ್ಟೇ ಮುಖ್ಯ. ಯಾರಿಗೆ ಎಲ್ಲಿ ಅನುಕೂಲ ಆಗುತ್ತದೆಯೋ ಅಲ್ಲಿಯೇ ಲಸಿಕೆ ಹಾಕಿಸಿಕೊಳ್ಳಲಿ ಎಂದು ಯಡಿಯೂರಪ್ಪ ಹೇಳಿದರು. ಸಚಿವ ಬಿ.ಸಿ. ಪಾಟೀಲ್ ಮನೆಯಲ್ಲಿ ಲಸಿಕೆ ಹಾಕಿಸಿಕೊಂಡಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇನ್ನೆರಡು ದಿನಗಳಲ್ಲಿ ನಾನು ಕೂಡ ಲಸಿಕೆ ಹಾಕಿಸಿಕೊಳ್ಳುತ್ತೇನೆ ಎಂದರು.